INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -6, November-December, 2025
Page No,50-60
Peer -Reviewed, Refereed Journal

# ಬುದ್ಧ ಪ್ರಜ್ಞೆಯ ಸಮಾಜ ಕುರಿತ ವಿಮರ್ಶಾತ್ಮಕ ವಿಶ್ಲೇಷಣೆ

**ಡಾ.ಹೆಚ್.ಎನ್.ಕಾಳಸ್ವಾಮಿ.**[1]

ಬುದ್ಧ ಪ್ರಜ್ಞೆಯ ಸಮಾಜ ಎಂಬ ಪರಿಕಲ್ಪನೆಯು ಬೌದ್ಧಧಮ್ಮದ ಮೂಲತತ್ವಗಳಾದ ಪ್ರಜ್ಞಾ, ಸಮತಾ ಮತ್ತು ಕರುಣಾ ಎಂಬ ನೈತಿಕತೆಯಿಂದ ನಿರ್ಮಿತವಾಗಿರುವ ಮಾನವ ಸಮುದಾಯದ ಆದರ್ಶ ರೂಪವನ್ನು ಸೂಚಿಸುತ್ತದೆ. ಬೌದ್ಧ ಚಿಂತನೆಯ ಪ್ರಕಾರ; ಸಮಾಜದಲ್ಲಿರುವ ಮೂಲ ಸಮಸ್ಯೆಗಳಾಗಿರುವ ಅವಿದ್ಯೆ, ಕಡುಬಯಕೆ ಅಥವಾ ತೃಷ್ಣೆ ಮತ್ತು ದ್ವೇಷ ಎಂಬ ಮೂರು ಮೂಲಬಾಧೆಗಳ ಪರಿಣಾಮವಾಗಿದೆ. ಈ ದುಃಖಸೃಷ್ಟಿ ಯಂತ್ರವನ್ನೇಗುರು ಬುದ್ಧರು "ಪಟಿಚ್ಚಸಮುಪಾದ" ಎಂಬ ತತ್ವದ ಮೂಲಕ ವಿಶ್ಲೇಷಿಸಿ, ಅದರ ಪರಿಹಾರವನ್ನು ಪ್ರಜ್ಞೆ ಮತ್ತು ಸಮ್ಯಕ್ ಮಾರ್ಗದ ಮೂಲಕ ವಿವರಿಸಿದ್ದಾರೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಸಮಾಜವನ್ನು ಬದಲಾಯಿಸುವುದು ಎಂಬುದು ಕೇವಲ ಆಡಳಿತ ಪದ್ಧತಿಯ ಬದಲಾವಣೆ ಅಥವಾ ಕಾನೂನು ಸರಿಪಡಿಸುವಿಕೆಯಲ್ಲ; ಅದು ಪ್ರತಿಯೊಬ್ಬ ಮಾನವನ ಮನಸ್ಸಿನ ಪರಿವರ್ತನೆಯಿಂದ ಸಮಾಜದ ಪರಿವರ್ತನೆ ಸಂಭವಿಸುತ್ತದೆ ಎಂಬುದು ಬೌದ್ಧ ತತ್ವದ ಆದ್ಯ ನಿರ್ಣಯವಾಗಿರುತ್ತದೆ. ಆದ್ದರಿಂದಲೇ ಪ್ರಜ್ಞೆ, ಸಮತಾ, ಕರುಣೆಯು ನೈತಿಕತೆಗಳ ಮೂಲಕ ರೂಪುಗೊಳ್ಳುವ ಸಮಾಜವೆಂದರೆ; ಕೇವಲ ಧಾರ್ಮಿಕ ಆದರ್ಶವಲ್ಲ, ಬೌದ್ಧಧಮ್ಮದಲ್ಲಿ ವ್ಯಕ್ತಿ ಮತ್ತು ಸಮೂಹ ಪರಿವರ್ತನಾ ಪರಿಕಲ್ಪನೆಯಾಗಿದೆ.

ಪ್ರಜ್ಞೆಯೂ ವಸ್ತುಗಳ ನಿಜ ಸ್ವರೂಪವನ್ನು ಮನಗಾಣುವ ಶಕ್ತಿ. ಸಮಗ್ರ ಸಮಾಜದಲ್ಲಿ ವ್ಯಕ್ತಿಗಳ ನಿರ್ಣಯ, ನೀತಿ ಮತ್ತು ಸಂಬಂಧಗಳನ್ನು ಪಾರದರ್ಶಕ ಹಾಗೂ ಪ್ರಯುಕ್ತವಾಗಿಸುತ್ತದೆ. ಅಂತಹ ಸಮಾಜದಲ್ಲಿ ಅಜ್ಞಾನಾಧಾರಿತ ಮೂಢನಂಬಿಕೆಗಳು, ಜಾತಿ, ವರ್ಗ, ಲಿಂಗದಂತಹ ಅಸಮಾನತೆಗಳು ಸ್ವಯಂ ಕರಗುತ್ತವೆ. ಕರುಣೆಯು ಬೌದ್ಧಧಮ್ಮದ ಅತ್ಯುನ್ನತ ಮಾನವೀಯ ಮೌಲ್ಯವಾಗಿದೆ. ಸಮಾಜದಲ್ಲಿ ಪರಸ್ಪರ ಸಹಾನುಭೂತಿ, ಅಹಿಂಸೆ, ಸಮತೋಲನ ಮತ್ತು ಗಹನವು ಮಾನವ ಸಂಬಂಧಗಳನ್ನು ಹೆಚ್ಚು ಹೆಚ್ಚು ವೃದ್ಧಿಸುತ್ತದೆ. ಕರುಣೆ ಆಧಾರಿತ ಸಮಾಜದಲ್ಲಿ ಸಂಘರ್ಷ, ದ್ವೇಷ, ಹಿಂಸಾಚಾರಗಳಿಗೆ

[1].ಸಂಶೋಧನಾ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಅವಕಾಶವನ್ನು ನೀಡುವುದಿಲ್ಲ. ನೈತಿಕತೆಯು ಪಂಚಶೀಲ, ದಶಶೀಲಗಳ ಜೀವನಶಾಸ್ತ್ರವಾಗಿದೆ. ಸಮಾಜದಲ್ಲಿ ನೈತಿಕ ಶಿಸ್ತನ್ನು ನಿರ್ಮಿಸಿ, ಮಾನವ ಸಮೂಹಕ್ಕೆ ಜವಾಬ್ದಾರಿತ್ವ ಮತ್ತು ನಿಯಂತ್ರಣದ ಸವ್ಯಸ್ಥಿತಿಯನ್ನು ಒದಗಿಸುತ್ತದೆ. ಇಂತಹ ನೈತಿಕ ಪದ್ಧತಿಯೂ ಬೌದ್ಧಧಮ್ಮದಲ್ಲಿ ಕೇವಲ ಧಾರ್ಮಿಕ ವಿಧಿಯಲ್ಲ; ಅದು ಸಮೂಹ ಸದಸ್ಯರ ಪರಸ್ಪರ ವಿಶ್ವಾಸ ಮತ್ತು ರಕ್ಷಣೆಗೆ ಆಧಾರವಾಗಿರುತ್ತದೆ. ಈ ಮೂರೂ ಮನವೀಯ ಮತ್ತು ಜೀವಪರ ಮೌಲ್ಯಗಳು ಸೇರಿ "ಬುದ್ಧ ಪ್ರಜ್ಞೆಯ ಸಮಾಜ"ವನ್ನು ದುಃಖ ನಿವೃತ್ತಿಯ ಮೇಲಿನ ಬೌದ್ಧ ಗುರಿಯನ್ನು ಸಾಮಾಜಿಕ ಕ್ರಿಯಾಶೀಲತೆಯಾಗಿ ಪರಿವರ್ತಿಸುತ್ತವೆ. ಇವು ಮಾನವನೊಳಗಿನ ದೋಷಗಳನ್ನು ಕಡಿಮೆ ಮಾಡಿ, ಮಾನವ-ಮಾನವ, ಮಾನವ-ಸಮಾಜ ಮತ್ತುಮಾನವ-ಪ್ರಕೃತಿಯ ನಡುವಿನ ಸಂಬಂಧಗಳನ್ನು ಸಮನ್ವಯಗೊಳಿಸುವ ನವ್ಯತತ್ವದ ಸಮಾಜವನ್ನು ರೂಪಿಸುತ್ತವೆ. ಗುರು ಬುದ್ಧರು ಬೋಧಿಸಿದ ಧಮ್ಮದ ಮೂಲವೇ "ಮನಸ್ಸು ಶುದ್ಧವಾದಾಗ ಸಮಾಜವೂ ಸೌಖ್ಯವಾಗುತ್ತದೆ" ಎಂಬ ಗಾಢವಾಗಿರುವ ತತ್ವವಾಗಿದ್ದು, ಇದು ಬೌದ್ಧ ಸಮಾಜ ನಿರ್ಮಾಣದ ಆದರ್ಶಕ್ಕೆ ಹಿರಿಮೆಯನ್ನು ನೀಡುತ್ತದೆ.

ಬೌದ್ಧಧಮ್ಮದಲ್ಲಿ ಪ್ರಜ್ಞೆ ಎಂಬುದು ಕೇವಲ ಬೌದ್ಧಿಕ ತಿಳುವಳಿಕೆ ಅಥವಾ ಶೈಕ್ಷಣಿಕ ಜ್ಞಾನದಷ್ಟಲ್ಲ; ಅದು ಅವಿದ್ಯೆಯ ಮೂಲವನ್ನು ಭೇದಿಸಿ ವಸ್ತುಗಳ ನಿಜ ಸ್ವರೂಪವನ್ನು ನೇರವಾಗಿ ಗ್ರಹಿಸುವ ಯಥಾಭೂತ ಅರಿವಾಗಿದೆ. ಈ ಪ್ರಜ್ಞೆಯು ಸಂಗ್ರಹಿತ ಮಾಹಿತಿಯಲ್ಲ, ಬದಲಿಗೆ ಅನುಭವಾತ್ಮಕ ಜ್ಞಾನ ಅಂದರೆ, ಮನಸ್ಸಿನ ಅಂತರಂಗದಲ್ಲಿ ಜಾಗೃತವಾಗುವ ನೇರ ಪರಿಚ್ಛೇದಕ ಬುದ್ಧಿಯಾಗಿದೆ. ಬೌದ್ಧತತ್ವದಲ್ಲಿ ಮಾನವನ ಬುದ್ಧಿಪ್ರಜ್ಞೆ ಕೇವಲ ಧಾರ್ಮಿಕ ಅಥವಾ ತತ್ವಶಾಸ್ತ್ರೀಯ ಕ್ಷೇತ್ರಕ್ಕೆ ಸೀಮಿತವಲ್ಲ; ಅದು ನೈತಿಕತೆ, ಮನಃಶಾಸ್ತ್ರ, ಸಮಾಜಶಾಸ್ತ್ರ ಮತ್ತು ಆಧ್ಯಾತ್ಮಿಕ ವಿಮೋಚನೆಗೆ ಸಮನ್ವಯ ನೀಡುವ ಕೇಂದ್ರಶಕ್ತಿಯಾಗಿದೆ. ಬುದ್ಧಗುರು ಪ್ರಜ್ಞೆಯನ್ನು "ಯಥಾಭೂತ ನಾನಾ ಸಾಹಿತ ಅರಿವು". ಅಂದರೆ; ವಸ್ತುಗಳನ್ನು ಅವು ಹೇಗಿದ್ದರೋ ಹಾಗೆ ಅರಿಯುವ ಸಾಮರ್ಥ್ಯ ಎಂದೇ ಪರಿಗಣಿಸಿದ್ದಾರೆ. ಇದರಲ್ಲಿ ಯಾವುದೇ ಭ್ರಾಂತಿ, ಮಿಥ್ಯಾದೃಷ್ಟಿ, ಜಾತ್ಯತೀತ ನಿರೂಪಣೆಗಳು ಅಥವಾಸ್ವಾರ್ಥ, ಅಹಂಕಾರದಮಸುಕಿಲ್ಲ. ಈ ಜ್ಞಾನವು ಅನಿತ್ಯ, ದುಃಖ ಮತ್ತು ಅನಾತ್ಮ ಎಂಬ ತ್ರಿಲಕ್ಷಣಗಳ ನೇರ ಬೋಧನೆಗೆ ದಾರಿ ಮಾಡಿಕೊಡುತ್ತದೆ; ಇವೆಲ್ಲವೂ ಅವಿದ್ಯೆ ನಿರ್ಮೂಲನೆ ಮತ್ತು ವಿಮೋಚನೆಯ ಮಾರ್ಗಕ್ಕೆ ಕೇಂದ್ರಾಂಗವಾಗಿವೆ.

ಬೌದ್ಧಧಮ್ಮದ ಪ್ರಕಾರ, ಅವಿದ್ಯೆ ಜನ್ಮ, ಮರಣ ಚಕ್ರವು ಮುಂದುವರೆಯುವ ಮೂಲ ಕಾರಣವಾಗಿದೆ. ಪ್ರಜ್ಞೆಯು ಈ ಚಕ್ರವನ್ನು ಮುರಿಯುವ, ಕಾರಣ-ಕಾರ್ಯ ಸಂಬಂಧದ ಸೂಕ್ಷ್ಮತೆಯನ್ನು ಗ್ರಹಿಸುವ ಬುದ್ಧಿಯಾಗಿದೆ. ವ್ಯಕ್ತಿಯು ಪ್ರಜ್ಞೆಯನ್ನು ವಿಕಸಿಸಿದಂತೆ, ಅವನು ದೋಷಗಳನ್ನು; ಲೋಭ, ದ್ವೇಷ, ಮೋಹ, ಪರಿಚ್ಛೇದಿಸಿ ಅವುಗಳಿಗೆ ಅಂಟಿಕೊಂಡಿರುವ ಮನೋಧರ್ಮಗಳನ್ನು ತ್ಯಜಿಸುತ್ತಾನೆ.

ನಿಕಾಯಗಳಲ್ಲಿ ಪ್ರಜ್ಞೆಯನ್ನು ಮೂರು ಹಂತಗಳನ್ನು ಗುರುತಿಸಲಾಗಿದೆ. ಮೊದಲನೆಯದು; ಸುತ್ತಮಯ ಪ್ರಜ್ಞೆ, ಇದು ಕೇಳಿ ಕಲಿತುಕೊಳ್ಳುವ ಜ್ಞಾನವಾಗಿದೆ. ಎರಡನೆಯದು; ಚಿಂತಾಮಯ ಪ್ರಜ್ಞೆ,ಇದು ತಾರ್ಕಿಕ ಮತ್ತು ಯುಕ್ತಿಸಮ್ಮತ ಪರಿಶೀಲನೆಯ ಜ್ಞಾನವಾಗಿದೆ. ಮೂರನೆಯದು; ಭಾವನಾಮಯ ಪ್ರಜ್ಞೆ,ಇದು ಧ್ಯಾನದ ಮೂಲಕ ಉದ್ಭವಿಸುವ ಅನುಭವಾತ್ಮಕ ಪ್ರಜ್ಞೆಯಾಗಿದೆ. ಈ ತ್ರಿಮೂರ್ತ ಪ್ರಜ್ಞೆಯ ಪರಿಪಕ್ವತೆಯಿಂದ ವ್ಯಕ್ತಿಗೆ ಕೇವಲ ಸ್ವಯಂ ವಿಮೋಚನೆ ಮಾತ್ರವಲ್ಲ, ಸಮಾಜದಲ್ಲಿ ನೈತಿಕತೆ, ಸಮತೆ ಮತ್ತು ಪರಸ್ಪರ ಗೌರವವನ್ನೂ ಬೆಳೆಸುವ ಸಾಮರ್ಥ್ಯ ಬರುತ್ತದೆ. ಇದರಿಂದಲೇ "ಬುದ್ಧ ಪ್ರಜ್ಞೆ" ಸಮಾಜದಲ್ಲಿ ಸಾಮಾಜಿಕ, ನೈತಿಕ ಪರಿವರ್ತನೆಯ ಮೂಲಶಕ್ತಿಯಾಗಿ ಪರಿಣಮಿಸುತ್ತದೆ.

ಬುದ್ಧ ಪ್ರಜ್ಞೆಯ ಸಮಾಜವೆಂದರೆ; ಜ್ಞಾನಾಧಾರಿತ, ಕಾರಣ-ಕಾರ್ಯ ಅರಿವುಳ್ಳ, ಮಿಥ್ಯಾಭಿಮಾನದಿಂದ ಮುಕ್ತ ಮತ್ತು ಸಮಾನತೆಯನ್ನು ಕೇಂದ್ರಗೊಳಿಸಿದ ಸಮಾಜವಾಗಿರುತ್ತದೆ. ಈ ಪರಿಕಲ್ಪನೆಯು ಕೇವಲ ಧಾರ್ಮಿಕ ಅಥವಾ ತತ್ವಶಾಸ್ತ್ರೀಯ ಆಶಯವಲ್ಲ; ಅದು ಬೌದ್ಧ ಸಮಾಜದ ನಿರ್ಮಾಣಕ್ಕೆ ಸಂಬಂಧಿಸಿದ ಒಂದು ನೈತಿಕ ಮತ್ತು ಸಾಮಾಜಿಕ ಪ್ರಜ್ಞೆಯ ಮಾದರಿಯಾಗಿದೆ. ಜ್ಞಾನಾಧಾರಿತ ಸಮಾಜದ ಅಡಿಪಾಯವೇ ಪ್ರಜ್ಞೆ, ಇದು ವಸ್ತುಗಳ ನಿಜ ಸ್ವಭಾವವನ್ನು ಅರಿಯುವ ಜ್ಞಾನ. ಇಂತಹ ಸಮಾಜದಲ್ಲಿ ಮೂಢನಂಬಿಕೆ, ಅಂಧನಂಬಿಕೆ, ಅನ್ಯಾಯ, ಜಾತಿಭೇದ, ಅತಿರೇಕದ ನಂಬಿಕೆ ಇವನ್ನೆಲ್ಲ ಜ್ಞಾನ ಮತ್ತು ಯುಕ್ತಿಯ ಬೆಳಕು ತೊಡೆದುಹಾಕುತ್ತದೆ. ಗುರು ಬುದ್ಧರು "ಅಂಧಕಾರವನ್ನು ದೂರಮಾಡುವ ಬೆಳಕು"ಯಂತೆ ಜ್ಞಾನವನ್ನು ಬೋಧಿಸಿದ್ದಾರೆ. ಆದ್ದರಿಂದ ಜ್ಞಾನಾಧಾರಿತ ಸಮಾಜವೆಂದರೆ; ಸತ್ಯ, ಪರಿಶೀಲನೆ ಮತ್ತು ತಾರ್ಕಿಕತೆಗಳನ್ನು ಮೂಲಮೌಲ್ಯವನ್ನಾಗಿ ಹೊಂದಿರುವ ಸಮುದಾಯವಾಗಿರುತ್ತದೆ. ಬೌದ್ಧಧಮ್ಮದ ಮೂಲತತ್ವವೇ ಪಟಿಚ್ಚ ಸಮುಪಾದವು ಈ ಎಲ್ಲ ಬಗೆಯಲ್ಲಿನ ಕಾರಣ-ಕಾರ್ಯ ಸಂಬಂಧದಿಂದ ಉದ್ಭವಿಸುತ್ತದೆ. ಇಂತಹ ಸಮಾಜದಲ್ಲಿ ಸಮಸ್ಯೆಯ ಕಾರಣವನ್ನು ತಿಳಿಯದೇ ತೆಗೆದುಕೊಳ್ಳುವ ಶೀಘ್ರ ನಿರ್ಣಯಗಳು ಕಡಿಮೆಯಾಗುತ್ತವೆ. ಸಾಮಾಜಿಕ ಅನ್ಯಾಯ ಅಥವಾ ಅಸ್ತವ್ಯಸ್ತತೆಗೆ ಜವಾಬ್ದಾರಿತ್ವದ ಅರಿವು ರೂಪಿಗೊಳ್ಳುತ್ತದೆ. ಹಿಂಸಾಚಾರ, ಜಗಳ, ದ್ವೇಷ ಇವೆರಡಕ್ಕೂ ಕಾರಣ ಏನೆಂಬುದನ್ನು ವೈಜ್ಞಾನಿಕ ಮತ್ತು ಮಾನಸಿಕ ದೃಷ್ಟಿಯಿಂದ ವಿಶ್ಲೇಷಿಸಲಾಗುತ್ತದೆ. ಹೀಗಾಗಿ, ಕಾರಣ-ಕಾರ್ಯ ಜ್ಞಾನವು ಸಾಮಾಜಿಕ ಶಾಂತಿ, ಸಮನ್ವಯ ಮತ್ತು ನೀತಿಯ ನೆಲೆಗಟ್ಟಾಗಿದೆ. ಗುರು ಬುದ್ಧರು ಮಾನವನ ದುಃಖದ ಮೂಲವೆಂದರೆ; ಅಹಂಕಾರ ಮತ್ತು ಮಮಕಾರ ಎಂದು ಹೇಳುತ್ತಾರೆ. ಅಹಂಕಾರಹೀನ ಸಮಾಜದಲ್ಲಿ ಜಾತಿ, ಧರ್ಮ, ವರ್ಗ, ಲಿಂಗ ಅಹಂಕಾರಗಳಿಗೂ ಸ್ಥಾನವಿಲ್ಲ. ಅಧಿಕಾರ, ಅಭಿಮಾನ, ಆತ್ಮಕೇಂದ್ರಿತ ಚಿಂತನೆ ಹಾಗೂ ದುರಾಶೆಗಳು ಕುಗ್ಗುತ್ತವೆ. ಪರಸ್ಪರ ಗೌರವ, ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ ದೊರೆಯುತ್ತದೆ. ಇದು ಸಾಮಾಜಿಕ ಶಾಂತಿ ಮತ್ತು ಸಮಾನತೆಯ

ಮೂಲಭೂತ ಷರತ್ತು. ಬೌದ್ಧಧಮ್ಮದಲ್ಲಿ ವರ್ಣ, ಜಾತಿ ವ್ಯತ್ಯಾಸಗಳಿಲ್ಲ; ನೈತಿಕತೆ ಮತ್ತು ಕರ್ಮವೇ ಮಾನವನ ಮೌಲ್ಯವಾಗಿದೆ. ಅದರ ಆಧಾರದ ಮೇಲೆ ರೂಪುಗೊಳ್ಳುವಂತಹ ಸಮಾಜವಾಗಿದೆ. ಸಮಾನ ಅವಕಾಶಗಳನ್ನೂ ನೀತಿ, ನ್ಯಾಯವನ್ನು ಮಹಿಳೆಯರ, ಬಾಲಕಿಯರ, ದೌರ್ಬಲ್ಯ ಗುಂಪುಗಳ ರಕ್ಷಣೆಯನ್ನು, ಬಡವರು, ಅಲ್ಪಸಂಖ್ಯಾತರ ಸಾಮಾಜಿಕ ನ್ಯಾಯವನ್ನು ಮುಖ್ಯವಾಗಿ ಉತ್ತೇಜಿಸುತ್ತದೆ. ಆದ್ದರಿಂದಲೇ ಬುದ್ಧ ಪ್ರಜ್ಞೆಯ ಸಮಾಜವು ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆಯ ದಿಸೆಯಲ್ಲಿ ಮಾನವ ಸಮಾಜವನ್ನು ಸಂಘಟಿಸುತ್ತದೆ. ಒಟ್ಟಾರೆಯವಾಗಿ; ಬುದ್ಧ ಪ್ರಜ್ಞೆಯ ಸಮಾಜ ಎಂದರೆ; ಜ್ಞಾನವೆ ಆಧಾರ, ನೀತಿವಂತಿಕೆ ಅದರ ಶಕ್ತಿ, ಕರುಣೆ ಅದರ ಹೃದಯ, ಪ್ರಜ್ಞೆ ಅದರ ಮಾರ್ಗದರ್ಶಕ, ಸಮಾನತೆ ಅದರ ಮೌಲ್ಯ ಮತ್ತು ಶಾಂತಿ ಅದರ ಗುರಿಯಾಗಿರುತ್ತದೆ. ಇದು ಗುರು ಬುದ್ಧರು ಬೋಧಿಸಿದ ಧಮ್ಮದಲ್ಲಿ ಬಿಂಬಿತವಾದ ವಿಮೋಚನಾತ್ಮಕ ಹಾಗೂ ಮಾನವೀಯ ಸಮಾಜ ಪರಿಕಲ್ಪನೆಯ ಪರಿಪೂರ್ಣ ರೂಪವಾಗಿದೆ.

ಜ್ಞಾನಾಧಾರಿತ ಸಾಮಾಜಿಕ ವ್ಯವಸ್ಥೆಯ ಮೂಲಕ ಬುದ್ಧ ಪ್ರಜ್ಞೆಯ ಸಮಾಜದ ಮೊದಲ ಹಾಗೂ ಮೂಲಾಧಾರ ಜ್ಞಾನವಾಗಿದೆ. ಇಲ್ಲಿ ಜ್ಞಾನ ಎಂದರೆ; ಕೇವಲ ಪುಸ್ತಕಾಧ್ಯಯನ ಅಥವಾ ತತ್ವಶಾಸ್ತ್ರೀಯ ಬೋಧನೆಯಲ್ಲ; ಅದರ ಬದಲಾಗಿ ಅಜ್ಞಾನವನ್ನು ನಿರ್ಮೂಲನೆ ಮಾಡುವ ಜಾಗೃತ ತತ್ವಜ್ಞಾನವಾಗಿದೆ. ಅರಿವು ಬೌದ್ಧ ಸಾಮಾಜಿಕ ಚಿಂತನೆಯ ಹೃದಯವೇ ಪಟಿಚ್ಚಸಮುಪಾದವಾಗಿದೆ. ಇದು "ಯಾವುದು ಕಾರಣದಿಂದ ಹುಟ್ಟಿತೋ, ಅದು ಆ ಕಾರಣ ನಾಶವಾದಾಗ ನಾಶವಾಗುತ್ತದೆ" ಎಂಬ ಕಾರಣ - ಕಾರ್ಯನಿರಂತರತೆಯ ಸಾಮಾನ್ಯ ನಿಯಮವನ್ನು ಸಮಾಜಕ್ಕೆ ಅನ್ವಯಿಸುತ್ತದೆ. ಗುರು ಬುದ್ಧರ ಕಾಲಮಾನದಲ್ಲಿ ವಿಭಾಗ, ವರ್ಣ, ಹಿಂಸೆಗಳ ಆಧಾರವು "ದೈವಾಧಿಕಾರ" ಅಥವಾ "ಜನ್ಮ" ಎನ್ನಲಾಗುತ್ತಿತ್ತು. ಆದರೆ, ಪಟಿಚ್ಚಸಮುಪಾದ ಎನ್ನುವುದು ಯಾವುದೂ ಜನ್ಮಸಿದ್ಧವಲ್ಲ; ಮಾನವನ ವರ್ತನೆ ಮತ್ತು ಚಿಂತನೆಯ ಕಾರ್ಯಗಳಿಂದಲೇ ಸಮಾಜ ನಿರ್ಮಾಣವಾಗುತ್ತದೆ ಎಂಬ ವೈಜ್ಞಾನಿಕ ದೃಷ್ಟಿಕೋನವನ್ನು ಸಮಾಜಕ್ಕೆ ನೀಡುತ್ತದೆ. ಇದರ ತಾತ್ಪರ್ಯವೆಂದರೆ; ಅಸಮಾನತೆ ದೈವಕೃತವಲ್ಲ; ಮಾನವಕೃತ. ದುಃಖಕ್ಕೆ ಹೊರಗಿನ ದೇವರು ಕಾರಣವಲ್ಲ; ಮಾನವ ಸಾಮಾಜಿಕ ಕಾರಣಗಳು ಕಾರಣ. ಸಮಾಜ ಪರಿವರ್ತನೆ ಸಾಧ್ಯ. ಏಕೆಂದರೆ ಕಾರಣಗಳನ್ನು ಬದಲಿಸಿದರೆ ಫಲವೂ ಬದಲಾಗುತ್ತದೆ.

ಅಜ್ಞಾನದ ನಿವೃತ್ತಿಗೆ ಶಿಕ್ಷಣ ಮತ್ತು ಜಾಗೃತಿಯು ಬೌದ್ಧ ಸಮಾಜದ ಕಲ್ಪನೆಯ ಪ್ರಕಾರ; ಜಾಗೃತಿ ಇರುವಲ್ಲಿ ಮಾತ್ರ ಭಯ, ಮೂಢನಂಬಿಕೆ, ಸಾಮಾಜಿಕ ವಿಕೃತಿ ಇವುಗಳ ನಿವೃತ್ತಿ ಸಾಧ್ಯ. ಗುರು ಬುದ್ಧರು "ವಿನಯ, ಶಿಕ್ಷಣ, ಪ್ರಜ್ಞೆ" ಇವನ್ನು ಸಮುದಾಯದ ಅಭಿವೃದ್ಧಿಗೆ ಮೂಲವನ್ನಾಗಿ ಮಾಡಿದ್ದರು. ಬಂಧಿತ ಮನಸ್ಸನ್ನು ಮುಕ್ತಗೊಳಿಸಲು ಶಿಕ್ಷಣವೇ ಪಥ ಎಂದು ಕೃತಕರ್ಪಿತವಾಗಿ ಒತ್ತಿಹೇಳಿದರು. ಅದೇ ಕಾರಣಕ್ಕೆ

ಬೌದ್ಧ ಸಮಾಜದಲ್ಲಿ ಮಹಿಳೆ, ಪುರುಷರಿಗೆ ಸಮಾನ ಶಿಕ್ಷಣ ಭಿಕ್ಷುಗಳು, ಗೃಹಸ್ಥರಿಗೆ ಸಮಾನ ಬೋಧನೆ ಪ್ರಶ್ನಿಸುವ ಹಕ್ಕಿಗೆ ರಕ್ಷಣೆ ಇವುಗಳು ಬಹುಮುಖ್ಯವಾಗಿದ್ದವು. ವೈಜ್ಞಾನಿಕ ಮತ್ತು ತಾರ್ಕಿಕ ಚಿಂತನೆಗೆ ಪ್ರಾಮುಖ್ಯತೆ ಗುರು ಬುದ್ಧರು ಬೋಧಿಸಿದ ಸಮಾಜದ ಮೂಲವೇ ತಾರ್ಕಿಕ ಪರಿಶೀಲನೆಯಾಗಿದೆ. ಕಾಲಾಮ ಸೂತ್ರದಲ್ಲಿ ತಾನೇ ಹೇಳಿದಂತೆಯೇ; "ಪರಂಪರೆ ಹೇಳುತ್ತದೆ ಎಂದು ನಂಬಬೇಡಿ; ಧರ್ಮಗ್ರಂಥ ಹೇಳುತ್ತದೆ ಎಂದು ನಂಬಬೇಡಿ; ಗುರು ಹೇಳುತ್ತಾರೆ ಎಂದು ನಂಬಬೇಡಿ. ಅದು ನಿಮ್ಮ ಅನುಭವ, ತಾರ್ಕಿಕತೆ ಮತ್ತು ಹಿತಕ್ಕೆ ಅನುಗುಣವಾಗಿದ್ದಾಗ ಮಾತ್ರ ಸ್ವೀಕರಿಸಿ" ಎಂಬುದಾಗಿದೆ. ಇದು "ಗುರು ಬುದ್ಧರ ಪ್ರಜ್ಞೆಯ ಸಮಾಜ"ಕ್ಕೆ ಮೂರು ಆಧಾರ ಸ್ತಂಭಗಳನ್ನು ನಿರ್ಮಿಸುತ್ತದೆ. ಅವುಗಳೆಂದರೆ; ಮೊದಲನೆಯದು; ನಿರ್ಧಿಷ್ಟವಾದ ವಿರೋಧ, ಎರಡನೆಯದು; ವೈಜ್ಞಾನಿಕ ಪರಿಶೀಲನೆ ಮತ್ತು ಮೂರನೆಯದು; ಕಾರಣಾಧಾರಿತ ಚಿಂತನೆ. ಈಗಾಗಲೇ 2600 ವರ್ಷಗಳ ಹಿಂದೆಯೇ ಗುರು ಬುದ್ಧರು ಮಾನವ ಸಮಾಜಕ್ಕೆ ನೀಡಿದ ತತ್ವವು ಇಂದಿನ ವೈಜ್ಞಾನಿಕ, ಜಾಗೃತ ಸಮಾಜದ ಮೂಲ ಸದೃಶವಾಗಿದೆ.

ಬುದ್ಧ ಪ್ರಜ್ಞೆಯ ಸಮಾಜದ ಎರಡನೆಯ ಆಧಾರಸ್ತಂಭವೇ ಕರುಣೆ. ಆದ್ದರಿಂದಲೇ ಬೌದ್ಧ ಪರಂಪರೆಯಲ್ಲಿ ಕರುಣೆ ಎಂದರೆ; ಕೇವಲ ಸಹಾನುಭೂತಿ ಅಥವಾ ಮಮತೆಯಲ್ಲ; ಅದು ದುಃಖದಲ್ಲಿರುವ ಜೀವಿಯನ್ನು ದುಃಖದಿಂದ ಬಿಡಿಸಲು ಮಾಡಿದ ನಿಷ್ಕಾಮ ಚಟುವಟಿಕೆಯಾಗಿದೆ. ಇದು ಮೈತ್ರಿ, ಕರುಣೆ, ಮುದಿತಾ, ಉಪೇಕ್ಷೆಗಳ ಸಮಗ್ರ ಸಾಮಾಜಿಕ ಅನ್ವಯ. ಜೀವಹಿಂಸೆ, ದ್ವೇಷ, ಹಾನಿಕಾರಕ ಮಾತು, ಕರ್ಮಗಳ ನಿವಾರಣೆಯೂ ಗುರು ಬುದ್ಧರ ಧಮ್ಮದ ಮೂಲ ಶಿಕ್ಷೆಯಾದ ಅಹಿಂಸಾ ಎಂಬ ಮೊದಲನಿಯಮವಾಗಿದೆ. ಇದರಲ್ಲಿ "ಯಾವ ಜೀವಕ್ಕೂ ಹಾನಿ ಮಾಡದಿರುವುದು." ಇದು ವೈಯಕ್ತಿಕ ನೈತಿಕತೆಯಷ್ಟೇ ಅಲ್ಲ; ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಆಧಾರವಾಗಿದೆ. ಏಕೆಂದರೆ; ದ್ವೇಷದಿಂದ ಹಿಂಸೆ ಹುಟ್ಟುತ್ತದೆ. ಹಿಂಸೆಯಿಂದ ಪ್ರತಿಹಿಂಸೆ, ಪ್ರತಿಹಿಂಸೆಯಿಂದ ಸಂಘ, ಸಮಾಜದ ಅಸ್ಥಿರತೆ. ಗುರು ಬುದ್ಧರು ದ್ವೇಷದ ಮನೋವೈಜ್ಞಾನಿಕ ಮೂಲವನ್ನು ಚಿಂತಿಸಿ ಹೇಳುತ್ತಾರೆ. "ದ್ವೇಷವನ್ನು ದ್ವೇಷದಿಂದ ಶಮನಗೊಳಿಸಲಾಗುವುದಿಲ್ಲ; ಕರುಣೆಯಿಂದ ಮಾತ್ರ ಸಾಧ್ಯ" ಎಂದಿದ್ದಾರೆ. ಅಂದರೆ, ಹಿಂಸೆಯ ವಲಯವನ್ನು ಮುರಿಯುವ ಏಕೈಕ ಮಾರ್ಗ. ಕರುಣೆ ಪ್ರಧಾನ ನೀತಿ, ಸರ್ವಜೀವಿಗಳ ಸಮಾನ ಗೌರವ ಗುರು ಬುದ್ಧರ ಸಾಮಾಜಿಕ ತತ್ವದಲ್ಲಿ "ಜೀವಿಗಳಲ್ಲಿ ಯಾವುದೂ ಕಡಿಮೆಹೆಚ್ಚೆಂದು ಇರುವುದಿಲ್ಲ." ಸಭ್ಯತೆ, ಆಚಾರ-ವಿಚಾರ, ವರ್ಣ, ಜನ್ಮ, ಜಾತಿಯಾವುದೂ ಜೀವದ ಮೌಲ್ಯವನ್ನು ಬದಲಿಸದು. ಸಂಯುಕ್ತ ನಿಕಾಯ ಮತ್ತು ಸುತ್ತನಿಪಾತಗಳಲ್ಲಿ ಗುರು ಬುದ್ಧರು ಮಾನವ, ಪಶು, ಪಕ್ಷಿ ಎಲ್ಲ ಜೀವಗಳನ್ನೂ "ಸರ್ವಸತ್ವಾ" ಎಂದು ಕರೆದು ಸಮಾನ ಗೌರವ ನೀಡಿದರು. ಕರುಣಾ ಮೂಲಕ ಸಮುದಾಯದಲ್ಲಿ ಸಾಮಾಜಿಕ ವರ್ಗೀಕರಣ ಕುಸಿದೀತು, ಜಾತಿ, ಧರ್ಮ, ಲಿಂಗ ಆಧಾರಿತ ಹಿಂಸೆ ನಿಲುಗಡೆಯಾಗುತ್ತದೆ.

ಒಬ್ಬರ ಕಲ್ಯಾಣವನ್ನು ಇನ್ನೊಬ್ಬರ ಕಲ್ಯಾಣಕ್ಕೆ ಸಂಬಂಧಿಸಿದಂತೆ ನೋಡುವ ಮನೋಭಾವ ಮೂಡುತ್ತದೆ. ಇವು "ಬುದ್ಧ ಪ್ರಜ್ಞೆಯ ಸಮಾಜ"ಕ್ಕೆ ನೈತಿಕ ಸಮತೋಲನಯನ್ನು ನೀಡುತ್ತವೆ.

ಗುರು ಬುದ್ಧರ "ಅಹಿಂಸಾ ಪರಮೋ ಧಮ್ಮಂ" ತತ್ವದ ಅನುಸರಣೆಯು ಬೌದ್ಧ ಪರಂಪರೆಯಲ್ಲಿ ಈ ವಾಕ್ಯ "ಅಹಿಂಸಾ ಪರಮೋ ಧಮ್ಮಂ" ಎಂದು ಹೆಚ್ಚು ಪ್ರಸಿದ್ಧವಾಗಿದೆ. ಗುರು ಬುದ್ಧರು "ಈ ಲೋಕದಲ್ಲಿ ದ್ವೇಷವನ್ನು ದ್ವೇಷದಿಂದ ಶಮನಗೊಳಿಸಲಾಗುವುದಿಲ್ಲ; ದ್ವೇಷವಿರಹದಿಂದ ಮಾತ್ರ ಶಮನಗೊಳ್ಳುತ್ತದೆ. ಇದು ಶಾಶ್ವತ ಧರ್ಮ."ಈ ತತ್ವವನ್ನು ಸಮಾಜಕ್ಕೆ ಅನ್ವಯಿಸಿದರೆ, ಸಮರ-ಸಂಘರ್ಷಗಳ ನಿವಾರಣೆ, ದ್ವೇಷ-ಧ್ರುವೀಕರಣಕ್ಕೆ ತಡೆ, ಅಲ್ಪಸಂಖ್ಯಾತ, ಬಲಹೀನವರ್ಗಗಳ ರಕ್ಷಣೆಯ ಭದ್ರತೆ, ಬಲಪ್ರಯೋಗವಿಲ್ಲದೆ ಜಾಗೃತಿ, ಸಂವಾದದ ಮೂಲಕ ಸಂಘರ್ಷ ಪರಿಹಾರಗಳಿಗೆ ಪಥ ಒದಗುತ್ತದೆ. ಕರುಣೆಯ ಮೂಲಕ ಸಮಾಜ ಎಂದರೆ; ಹಿಂಸೆ ನಿಲ್ಲಿಸುವಷ್ಟೇ ಅಲ್ಲ; ಹಿಂಸೆಗೆ ಕಾರಣವಾಗುವ ಮನೋವೈಜ್ಞಾನಿಕ ಮೂಲಗಳನ್ನು ಬದಲಿಸಿ ಮಾನವೀಯ ಸಹಜೀವನದ ಸಂಸ್ಕೃತಿ ನಿರ್ಮಿಸುವುದು. ಬೌದ್ಧತತ್ವದಲ್ಲಿ ಸಮಾನತೆ ಎಂದರೆ; ಕೇವಲ ಕಾನೂನಾತ್ಮಕ ಸಮಾನತೆ ಅಥವಾ ಸಾಮಾಜಿಕ ಮೌಖಿಕ ಘೋಷಣೆ ಅಲ್ಲ; ಇದೊಂದು ಮಾನವ ಮೌಲ್ಯವನ್ನೇ ಜಾತಿ, ವರ್ಣ, ಜನ್ಮದಿಂದಲೇ ಸಂಪೂರ್ಣವಾಗಿ ಬೇರ್ಪಡಿಸಿ, "ಧಮ್ಮ, ಶೀಲ ಮತ್ತು ಪ್ರಜ್ಞೆ"ಗಳ ಮೇಲೆ ಆಧರಿಸಲ್ಪಟ್ಟ ಸಮತೆಯ ಮೂಲಕ ಮಾನವ ಸಮಾಜವನ್ನು ನಿರ್ಮಿಸುವುದು. ಗುರು ಬುದ್ಧರು ಬ್ರಾಹ್ಮಣಿಕ ವರ್ಣವ್ಯವಸ್ಥೆಯನ್ನು ತೀವ್ರವಾಗಿ ಪ್ರಶ್ನಿಸಿ, "ಜನ್ಮದಿಂದ ಬ್ರಾಹ್ಮಣನಾಗುವುದಿಲ್ಲ; ಶೀಲ, ಸಮ್ಯಕ ಚರ್ಯೆಯಿಂದ ಬ್ರಾಹ್ಮಣ" ಎಂದು ಘೋಷಿಸಿದರು. ಇದು ಭಾರತ ಇತಿಹಾಸದಲ್ಲೇ ಜನ್ಮಾಧಾರಿತ ಶ್ರೇಣೀಕೃತ ವಿರುದ್ಧದ ಅತ್ಯಂತ ಕ್ರಾಂತಿಕಾರಿ ಘೋಷಣೆಗಳಲ್ಲಿ ಒಂದಾಗಿದೆ. ಜಾತಿ, ವರ್ಗ, ಲಿಂಗಬೇಧ ರಹಿತಸಮಾಜ ಬೌದ್ಧಧಮ್ಮವು ಜಾತಿ, ವೃತ್ತಿ, ವರ್ಣ. ಈ ಯಾವುದನ್ನೂ ಸಾಮಾಜಿಕ ಶ್ರೇಣಿ ನಿಗದಿಮಾಡುವ ಮೂಲವಾಗಿರಲಿಲ್ಲ. ಆದ್ದರಿಂದಲೇ ಧಮ್ಮವೂ ಎಲ್ಲರಿಗೂ ಸಮಾನ. ಗುರು ಬುದ್ಧರು ಅಂಬಟ್ಟ ಸುತ್ತ, ಅಸ್ಸಲಾಯನ ಸುತ್ತ, ಮಧುರ ಸುತ್ತಗಳಲ್ಲಿ ವರ್ಣಭೇದದ ತಾರ್ಕಿಕ ಅಸಂಗತತೆಯನ್ನು ಚರ್ಚಿಸಿದ್ದಾರೆ. ಗುರು ಬುದ್ಧರು ಸಾಮಾಜಿಕ ಶ್ರೇಣಿ ನಿರ್ಮೂಲನೆ ಮಾನವ ಮೌಲ್ಯಕ್ಕೆ ಧರ್ಮ, ನೈತಿಕತೆಯ ಆಧಾರದ ಮೇಲೆ ಜನ್ಮಾಧಾರಿತ ಶ್ರೇಣೀಕೃತ ವ್ಯವಸ್ಥೆಯನ್ನು ನಾಶಮಾಡುವುದರಿಂದ "ಬುದ್ಧ ಪ್ರಜ್ಞೆಯ ಸಮಾಜ"ದಲ್ಲಿ ಜಾತಿಯ ಗುರುತು ಸಾಮಾಜಿಕ ಮೌಲ್ಯವನ್ನು ನಿಗದಿಪಡಿಸುವುದಿಲ್ಲ. ಹಾಗಾಗಿಯೇ ಮಾನವನ ವರ್ತನೆ, ಶೀಲ, ನೈತಿಕತೆ ಮಾತ್ರ ಮೌಲ್ಯಮಾಪನದ ಆಧಾರವೂ ಮನುಷ್ಯ-ಮನುಷ್ಯರ ನಡುವೆ ಪ್ರತ್ಯೇಕತೆಯನ್ನು ಕಡಿಮೆಮಾಡುತ್ತದೆ.

ಸಮಾನ ಅವಕಾಶಗಳಿರುವ ಸಮಾಜ ಬೌದ್ಧ ಸಂಘವು ವಿಶ್ವ ಇತಿಹಾಸದಲ್ಲಿ ಮೊದಲ ಸಮಾನಾವಕಾಶ ಸಂಸ್ಥೆಗಳಲ್ಲಿ ಒಂದು. ಅಲ್ಲಿ ಬ್ರಾಹ್ಮಣ, ಕ್ಷೇತ್ರಿಯ, ವೈಶ್ಯ ಮತ್ತು ಶೂದ್ರ ಈ ಎಲ್ಲರೂ ಸಮನಾಗಿ ಪ್ರವೇಶ ಪಡೆದರು. ಭಿಕ್ಕುಣಿ ಸಂಘದ ಸ್ಥಾಪನೆಯ ಮೂಲಕ ಮಹಿಳೆಯರಿಗೂ ಸಮಾನ ಆತ್ಮಿಕ, ಶೈಕ್ಷಣಿಕ ಅವಕಾಶ, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ ಯಾವುದಾದರೂ, ಎಲ್ಲಾ ಸದಸ್ಯರಿಗೆ ಸಮಾನ ಧಮ್ಮವಿನಯವಿದೆ. ಇದು "ಬುದ್ಧ ಪ್ರಜ್ಞೆಯ ಸಮಾಜ"ಕ್ಕೆ ಅತ್ಯಂತ ಪ್ರಮುಖ ಪಾಠವಾಗಿರುತ್ತದೆ. ಅವಕಾಶಗಳ ಸಮಾನತೆಯು ಸಮಾಜದ ದುಃಖ ನಿವೃತ್ತಿಗೆ ಅಗತ್ಯವಾದ ಒಂದು ಮೂಲ ಸಾಧನವಾಗಿದೆ. ಇಲ್ಲಿ ಸಮಾನತೆ ಎಂದರೆ; ಶಿಕ್ಷಣಕ್ಕೆ ಸಮಾನ ಪ್ರವೇಶ ಉದ್ಯೋಗದಲ್ಲಿ ಪಾಲ್ಗೊಳ್ಳುವಿಕೆಗೆ ಸಮಾನತೆ, ಲಿಂಗ, ಜಾತಿ, ಆರ್ಥಿಕ ಸ್ಥಿತಿಯ ಆಧಾರಿತ ಅಡ್ಡಿ ಇಲ್ಲದಂತಿರಬೇಕು ಸಮಾಜದ ನಿರ್ಧಾರಾತ್ಮಕ ಪ್ರಕ್ರಿಯೆಗಳಲ್ಲಿ ಎಲ್ಲರ ಪಾಲ್ಗೊಳ್ಳುವಿಕೆಯಾಗಿರುತ್ತದೆ.

ಬುದ್ಧ ಪ್ರಜ್ಞೆಯ ಸಮಾಜವು ಧಾರ್ಮಿಕ ರಾಜ್ಯವಲ್ಲ. ತತ್ವಶ್ರದ್ಧೆಯ ಹೆಸರಿನಲ್ಲಿ ಹೇರಳವೊಂದರ ಮೇಲೆ ಬಲವಂತ ಮಾಡುವ ವ್ಯವಸ್ಥೆಯಲ್ಲ. ಇದು ನೈತಿಕ ಮತ್ತು ಲೌಕಿಕ ರಾಜ್ಯವು ಅರ್ಥಾತ್ ಆಡಳಿತ ಧರ್ಮಗ್ರಂಥಾಧಾರಿತವಲ್ಲ; ಧಮ್ಮವೂ ನೀತಿಶಾಸ್ತ್ರ, ಸಮ್ಯಕ ನ್ಯಾಯ, ಕರುಣೆ, ಸಮಾನತೆಯು ಗುರು ಬುದ್ಧರು ಚಕ್ರವತ್ತಿ ಸೀಹನಾದ ಸುತ್ತದಲ್ಲಿ ನೈತಿಕ ಆಡಳಿತದ ದಶ ರಾಜಧಮ್ಮವನ್ನು ನೀಡಿದ್ದಾರೆ. ಅವುಗಳೆಂದರೆ; ದಾನ, ಶೀಲ, ಪಾರಿಜಗ್ಗ, ಅಜ್ಜವ, ಮದ್ದವ, ತಪೋ, ಅಕ್ಕೋಧ, ಅಹಿಂಸಾ, ಖಂತೆ ಅವಿರೋಧ ಈ ಎಲ್ಲವೂ ಲೌಕಿಕ ಮತ್ತು ನೈತಿಕ ಮೌಲ್ಯಗಳಾಗಿವೆ. ಗುರು ಬುದ್ಧರು ನೈತಿಕ ಆಡಳಿತವಿಲ್ಲದೆ ಸಮಾನತೆ ಸಾಧ್ಯವಿಲ್ಲ; ಸಮಾನತೆ ಇಲ್ಲದೆ ಪ್ರಜ್ಞೆಯ ಸಮಾಜ ನಿರ್ಮಾಣ ಸಾಧ್ಯವಿಲ್ಲ ಎಂದಿದ್ದಾರೆ."ಬುದ್ಧ ಪ್ರಜ್ಞೆಯ ಸಮಾಜ"ದ ಕೇಂದ್ರೀಯ ತತ್ವವೆಂದರೆ; ಆಡಳಿತ ಮತ್ತು ಸಾರ್ವಜನಿಕ ಜೀವನವು ಶೀಲ, ಪ್ರಜ್ಞೆ ಮತ್ತು ಕರುಣೆಗಳ ಮೇಲೆ ಸ್ಥಾಪಿತವಾಗಿರಬೇಕು. ಬೌದ್ಧಧಮ್ಮದಲ್ಲಿ ಶೀಲ ಎಂದರೆ; ಕೇವಲ 'ನಿಷೇಧಗಳು' ಅಲ್ಲ; ಸಮಾಜದ ನೈತಿಕ ಮತ್ತು ಸಾಮೂಹಿಕ ಆರೋಗ್ಯವನ್ನು ಕಾಪಾಡುವ ಧಮ್ಮದ ಪ್ರಬಲ ನಿಯಮಗಳು. ಬೌದ್ಧ ಪರಂಪರೆಯಲ್ಲಿ ಪಂಚಶೀಲ ಮತ್ತು ದಶಶೀಲಗಳನ್ನು ಗುರು ಬುದ್ಧರು ಕೇವಲ ಭಿಕ್ಷು ಭಾವಚಿತ್ರಣಕ್ಕೆ ಮಾತ್ರವಲ್ಲ ಯಾವುದೇ ನಾಗರಿಕ ಸಮಾಜದ ನೈತಿಕ ಚಟುವಟಿಕೆಗಳನ್ನು ನಿಯಂತ್ರಿಸುವ ಆಧಾರವಾಗಿ ಪರಿಗಣಿಸಿದ್ದಾರೆ.

ಬೌದ್ಧ ನೈತಿಕತೆಯಲ್ಲಿ ಸತ್ಯವು ಕೇವಲ ಸುಳ್ಳು ಮಾತು ಬಿಡುವುದು ಮಾತ್ರವಲ್ಲ; ಆಡಳಿತ ಮತ್ತು ನ್ಯಾಯಾಂಗ ಸಂಸ್ಥೆಗಳ ಪಾರದರ್ಶಕತೆ ಸಾರ್ವಜನಿಕ ಮಾಹಿತಿಯ ನಿಷ್ಪಕ್ಷಪಾತ ಹಂಚಿಕೆ, ಭ್ರಷ್ಟಾಚಾರ ನಿರಾಕರಣೆ ಇವುಗಳನ್ನೆಲ್ಲ ಒಳಗೊಂಡಿದೆ. ಸತ್ಯಾಧಾರಿತ ಸಮಾಜವು ವಿಶ್ವಾಸ ಮತ್ತು ಸಾಮಾಜಿಕ ಏಕತೆಯನ್ನು, ಗುರು ಬುದ್ಧರು ಸತ್ಯವನ್ನು "ಏಕೈಕ ಅಜೇಯ ಬಲ" ಎಂದು ಸಚ್ಚ ವಗ್ಗ (ಧಮ್ಮಪದ)ದಲ್ಲಿ

ಪ್ರತಿಪಾದಿಸುತ್ತಾರೆ. ಅಹಿಂಸೆಯ ವ್ಯಾಪ್ತಿ ಬೌದ್ಧಧಮ್ಮದಲ್ಲಿ ಬಹಳ ವಿಶಾಲ. ದೈಹಿಕ ಹಾನಿ, ಮಾನಸಿಕ ಹಾನಿ, ವಾಣಿಯ ಮೂಲಕ ಹಿಂಸೆ, ನೀತಿಪರ ಹಿಂಸೆಯೂ ನೈತಿಕ ಆಡಳಿತದಲ್ಲಿ ಸರ್ಕಾರವು ರಾಜ್ಯಾದಂಡದ ದುರುಪಯೋಗ ಮಾಡಬಾರದು. ಅಲ್ಪಸಂಖ್ಯಾತರ ಮೇಲೆ ಹಿಂಸೆ ಅಥವಾ ಭೇದಾಭಿಪ್ರಾಯ ತೋರಬಾರದು. ದ್ವೇಷ, ತೃಷೆ ಆಧಾರಿತ ರಾಜಕೀಯ ಮಾಡಬಾರದು. ಅಹಿಂಸೆಯ ನಿಯಮವು ಸಂಘರ್ಷ ಪರಿಹಾರದಲ್ಲಿ ಸಂವಾದ ಮತ್ತು ಸಹಕಾರಕ್ಕೆ ಆದ್ಯತೆಯನ್ನು ನೀಡುತ್ತದೆ. ಅಸ್ತೇಯ ಎಂದರೆ; ಸ್ವಾರ್ಥಕ್ಕಾಗಿ ಯಾವುದನ್ನೂ ಕಬಳಿಸದಿರುವುದು. ಸಮಾಜದ ಮಟ್ಟದಲ್ಲಿ ಇದು, ಸಾರ್ವಜನಿಕ ಸಂಪನ್ಮೂಲಗಳ ಕಳವು ಇಲ್ಲ. ಭ್ರಷ್ಟಾಚಾರ, ಲಂಚದಂತಹ ದುರುಪಯೋಗವಿಲ್ಲ, ನಿಸ್ವಾರ್ಥ ಆಡಳಿತ ಸಮನ್ವಿತ ವಿತರಣಾ ನೀತಿಗಳು. ಇವೆಲ್ಲ "ಬುದ್ಧ ಪ್ರಜ್ಞೆಯ ಸಮಾಜ"ದ ಆರ್ಥಿಕ ನ್ಯಾಯತೆಯ ಭಾಗವಾಗಿವೆ. ಗುರು ಬುದ್ಧರುದಶ ರಾಜಧಮ್ಮದಲ್ಲೂ ದಾನ, ಅಜ್ಜವ, ಅಲೋಭತತ್ವಗಳನ್ನು ರಾಜನ ಕರ್ತವ್ಯವನ್ನಾಗಿ ಮಾಡಿದ್ದಾರೆ.

ಬೌದ್ಧ ನೈತಿಕತೆಯಲ್ಲಿ ಮದ್ಯ, ಮಾದಕವಸ್ತುಗಳು "ಅಜ್ಞಾನ, ಅಪ್ರಜ್ಞೆ, ಅನ್ಯಾಯ"ಕ್ಕೆ ಕಾರಣವೆಂದು ಪರಿಗಣಿಸಲಾಗುತ್ತದೆ. ಮದ್ಯದ ನಶೀಲವಸ್ತುಗಳ ನಿಯಂತ್ರಣ, ಅಪರಾಧ ಪ್ರಮಾಣ ಕಡಿಮೆ, ಗೃಹ ಹಿಂಸೆ, ದುವರ್ತನೆಯನ್ನು ತಗ್ಗುವುದು ಸಾರ್ವಜನಿಕ ಶಾಂತಿ, ನಿಯಮ ಸಾಧ್ಯ. ಆಡಳಿತಕ್ಕೆ ತಾರತಮ್ಯವಿಲ್ಲದ ಚಿಂತನೆ ಮದ್ಯನಿಷೇಧ ಬೌದ್ಧ ಸಮಾಜದಲ್ಲಿ ಮನಸ್ಸಿನ ಸ್ಪಷ್ಟತೆಗೆ ಆಧಾರವಾಗಿದೆ. ಬೌದ್ಧ ಶೀಲದಲ್ಲಿ ಕಾಮನಾಸಂಯಮ ಎಂದರೆ; ವಿಕೃತ, ಶೋಷಕ, ಅನೈತಿಕ ಮತ್ತು ಲೈಂಗಿಕತೆಯ ನಿಯಂತ್ರಣವು ಮಹಿಳೆಯರ ಗೌರವ ರಕ್ಷಣೆ, ಕುಟುಂಬ ಸಾಮಾಜಿಕ ಸ್ಥಿರತೆ, ಅಧಿಕಾರವೂ ಧರ್ಮದ ಹೆಸರಿನಲ್ಲಿ ನಡೆಯುವ ಲೈಂಗಿಕ ದುರಾಚಾರ ತಡೆ ಇದು ಸಮಾಜದ ಮಾನವೀಯತೆ, ಗೌರವ ಮತ್ತು ಸಹಬಾಳ್ವೆಗೆ ಮೂಲಾಧಾರವಾಗಿದೆ. ಗುರು ಬುದ್ಧರುವಿನ ಸಂದೇಶವೆಂದರೆ; "ಶೀಲವಿಲ್ಲದ ಆಡಳಿತ ದುಃಖ, ಅನ್ಯಾಯ ಮತ್ತು ಭ್ರಷ್ಟಾಚಾರಕ್ಕೆ ಕಾರಣ; ಶೀಲಾಧಾರಿತ ಆಡಳಿತ ಸಮಾನತೆ, ನ್ಯಾಯ ಮತ್ತು ಶಾಂತಿಗೆ ಕಾರಣ." ಹೀಗಾಗಿ "ಬುದ್ಧ ಪ್ರಜ್ಞೆಯ ಸಮಾಜ" ಎಂದರೆ; ನೈತಿಕತೆಯನ್ನು ಕಾನೂನಿಗಿಂತ ಮೇಲಾಗಿ ಇಟ್ಟು, ಧರ್ಮವನ್ನು ಧಾರ್ಮಿಕ ಆಚರಣೆಯಲ್ಲ, ಸಾಮಾಜಿಕ ಜವಾಬ್ದಾರಿಯಾಗಿ ರೂಪಿಸುವ ಆಡಳಿತ ಮಾದರಿಯಾಗಿದೆ.

ಬೌದ್ಧಧರ್ಮದಲ್ಲಿ "ಸಮಾಜ" ಎಂಬ ಪರಿಕಲ್ಪನೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪರಿಕಲ್ಪನೆಯಷ್ಟೇ ಅಲ್ಲ; ಅದು ನೈತಿಕ, ಸಂಘಟಿತ ಮತ್ತು ಸಮಾನತದ ಮೂಲಕ ಮಾನವ ಸಮುದಾಯದ ರಚನೆಯ ತತ್ವಶಾಸ್ತ್ರವಾಗಿದೆ. ಗುರು ಬುದ್ಧರ ಕಾಲಮಾನದಿಂದಲೇ ಬೌದ್ಧ ಸಂಪ್ರದಾಯವು ಸಂಘ, ಗಣ ಮತ್ತು

ಜನಸಮೂಹಗಳನ್ನು 'ಮಾದರಿ ಸಮಾಜ'ಗಳಾಗಿ ರೂಪಿಸಿತು. ಈ ಪರಿಕಲ್ಪನೆಗಳು ವಿನಯ ಪಿಟಕ, ಸುತ್ತ ಪಿಟಕ ಮತ್ತು ಅಭಿಧಮ್ಮ ಪಿಟಕಗಳಲ್ಲಿ ಹಲವು ಸ್ಥಳಗಳಲ್ಲಿ ಸ್ಪಷ್ಟವಾಗಿವೆ.

ಬೌದ್ಧ ಸಂಘಗಳು ಇತಿಹಾಸದಲ್ಲಿ ಪ್ರಥಮ ಪ್ರಜಾಪ್ರಭುತ್ವ ಮೌಲ್ಯಗಳನ್ನು ಅಭ್ಯಾಸಿಸಿದ ಸಾಮಾಜಿಕ ಸಮುದಾಯಗಳು. ವಿನಯ ಪಿಟಕದ ಪ್ರಕಾರ, ಭಿಕ್ಷು ಸಂಘದಲ್ಲಿ ಎಲ್ಲಾ ನಿರ್ಣಯಗಳು ಸಂಘಕಮ್ಮದ ಮೂಲಕ ಕೈಗೊಳ್ಳಲ್ಪಡುತ್ತದೆ. ಅಂದರೆ, ಎಲ್ಲ ಸದಸ್ಯರಿಂದ ಸಮಾನ ಹಕ್ಕಿನೊಂದಿಗೆ ಚರ್ಚೆ, ತಾರ್ಕಿಕ ವಾದ, ಪ್ರತಿವಾದದ ಮತಪ್ರಶ್ನೆ ಅಲ್ಪಸಂಖ್ಯಾತ ಅಭಿಪ್ರಾಯಕ್ಕೂ ಗೌರವ. ನಿಯಮ ವಿನಯಗಳ ತಿದ್ದುಪಡಿಗಳಿಗೂ ಸಾಮೂಹಿಕ ಅನುಮತಿ ಇದು ಆಧುನಿಕ ಸಂಸದೀಯ ಪ್ರಜಾಪ್ರಭುತ್ವದ ಮೂಲ ಮೌಲ್ಯಗಳಿಗೆ ಸಮಾನವಾದ ವ್ಯವಸ್ಥೆಯಾಗಿದೆ. ವಿಕೇಂದ್ರೀಕೃತ ನಿರ್ವಹಣೆಯೂ ಬೌದ್ಧ ಸಂಘಗಳು ಕೇಂದ್ರೀಕೃತ ಅಧಿಕಾರವಿಲ್ಲದ ವಿಕೇಂದ್ರೀಕೃತ ಸಂಸ್ಥೆಗಳು ಪ್ರತಿ ಸ್ಥಳೀಯ ಸಂಘ ತನ್ನದೇ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲದು. ಗುರು ಬುದ್ಧರ ಮಾತಿನ ಪ್ರಕಾರ; "ಧಮ್ಮ ವಿನಯವೇ ನಿಮ್ಮ ಗುರು." ಇದು ಅಧಿಕಾರವನ್ನು ಒಬ್ಬ ವ್ಯಕ್ತಿಯ ಕೈಯಲ್ಲಿ ಸಿಮಿಡಿಸುವುದನ್ನು ತಡೆಯುತ್ತದೆ. ಧಮ್ಮವನ್ನೇ ನಿಯಮಕಟ್ಟುವಿಕೆಯ ಏಕೈಕ ಆಧಾರಗೊಳಿಸುತ್ತದೆ. ಇದು ಬುದ್ಧ ಪ್ರಜ್ಞೆಯ ಸಮಾಜದಲ್ಲಿ ಕೇಂದ್ರೀಕರಣವಿಲ್ಲದ ಆಡಳಿತಕ್ಕೆ ಮಾದರಿಯಾಗುತ್ತದೆ.

ಮೌಖಿಕ ಸಂವಾದ ಮತ್ತು ಸಹಭಾಗಿತ್ವವು ಸಂಘದಲ್ಲಿ ನಿರ್ಧಾರಗಳು ಮೌಖಿಕ ಸಂವಾದ ಮೂಲಕ ನಡೆಯುತ್ತವೆ. ಹಾಗೆಯೇ ಪ್ರಸನ್ನಚಿತ್ತ ಮತ್ತು ಸಮತಾಭಾವ ಕಾಪಾಡಬೇಕು. ಸಮ್ಮಟ್ಟಿನಿಯಾವ, ಉಪೋಸಥ ಕಾರ್ಯಕ್ರಮಗಳು, ಪಾವಾರ್ಣಾ ದಿನಚರಿಗಳೆಲ್ಲ ಸಂವಾದ ಮತ್ತು ಸಮೂಹ ನಿರ್ಣಯದ ಆಚರಣೆಗಳನ್ನು ಒಳಗೊಂಡಿವೆ. ಇದರ ಮೂಲಕ ಸಂಘದ ಒಳಗೆ ಘರ್ಷಣೆಗಳ ಪರಿಹಾರ, ವಾದವಿವಾದಗಳ ನ್ಯಾಯಸಮ್ಮತ ಪರಿಹಾರ, ಹಿರಿಯ ಮತ್ತು ಕಿರಿಯರ ನಡುವಿನ ಸಂವಾದ ಸಮೂಹ ನಿರ್ಣಯಕ್ಕೆ ಅಂತರಂಗ ಶುದ್ಧತೆ. ಗುರು ಬುದ್ಧರು "ಸಂಘವು ಏಕಮನಸ್ಸಾಗಿರುವಾಗ ಮಾತ್ರ ಅಭಿವೃದ್ಧಿ ಸಾಧ್ಯ" ಎಂದು ಹೇಳಿರುವುದು ಚಕ್ಕವತ್ತಿ ಸೀಹನಾದ ಸುತ್ತದಲ್ಲಿದೆ.

ಬೌದ್ಧ ಸಂಘದ ನಿತ್ಯ ಜೀವನವು ಶಿಷ್ಟಾಚಾರ ವಿನಯ ಮಿತೋಪಭೋಗ ಹಿಂಸಾಮುಕ್ತ ಆಹಾರ, ಕರ್ಮ, ಮನನ, ಧ್ಯಾನ, ಸಮೂಹ ಕಾರ್ಯಗಳಲ್ಲಿ ಜವಾಬ್ದಾರಿ ಇವೆಲ್ಲವೂ ಪ್ರಜ್ಞಾ, ಕರುಣಾ ಸಂಯಮದ ಮೇಲೆ ಹೆಚ್ಚು ಆಧಾರಿತ ಸಾಮಾಜಿಕ ಜೀವನ ಪದ್ಧತಿಯನ್ನು ರೂಪಿಸುತ್ತವೆ. ಇದು ಬುದ್ಧ ಪ್ರಜ್ಞೆಯ ಸಮಾಜಕ್ಕೆ ಸಾಮಾಜಿಕ ಸಂಯಮವೂ ಸಂಸ್ಕಾರವನ್ನು ನೀಡುತ್ತದೆ. ಸಮಾನ ಸ್ಥಾನಮಾನವು ಸಂಘದ ಮೂಲತತ್ವವಾಗಿದೆ. "ಜಾತಿಯಿಲ್ಲ, ವರ್ಣವಿಲ್ಲ, ಕೇವಲ ಧಮ್ಮ ವಿನಯವಿದೆ." ಗುರು ಬುದ್ಧರು ವರ್ಣಭೇದದ ತಾರ್ಕಿಕ ನಿಷೇಧ ನೀಡಿದ್ದಾರೆ. ಸಂಘದಲ್ಲಿ ಬ್ರಾಹ್ಮಣ-ಶೂದ್ರರಬೇಧವಿಲ್ಲ, ಪುರುಷ-

ಮಹಿಳೆಯರ ವೇದಿಕೆಯ ವ್ಯತ್ಯಾಸವಿಲ್ಲ (ಭಿಕ್ಕುಣಿ ಸಂಘದ ಸ್ಥಾಪನೆ) ವಸ್ತುಧನ, ಆಸ್ತಿ ಆಧಾರಿತ ಅಸಮಾನತೆ ಇಲ್ಲ. ಎಲ್ಲರಿಗೂ ಸಮಾನ ಧರ್ಮ, ನೈತಿಕ ಹಕ್ಕು ಅದರ ಪರಿಣಾಮವಾಗಿ ಸಮಾನತೆಯ ಆಧಾರದ ಮೇಲೆ ಸಮೂಹ ಜೀವನವು ಬುದ್ಧ ಪ್ರಜ್ಞೆಯ ಸಮಾಜದ ಪ್ರಾಥಮಿಕ ರೂಪವಾಗಿದೆ.

ಬುದ್ಧ ಪ್ರಜ್ಞೆಯ ಸಮಾಜ ಎಂಬುದು ಬೌದ್ಧಧಮ್ಮದ ಪ್ರಜ್ಞಾ (ಜ್ಞಾನ), ಕರುಣಾ (ಸಹಾನುಭೂತಿ), ಸಮತಾ ಮತ್ತು ಅಹಿಂಸಾ ಎಂಬ ನಾಲ್ಕು ಮೂಲತತ್ವಗಳನ್ನು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಅನ್ವಯಿಸಿ ರೂಪುಗೊಳ್ಳುವ ಸಮಗ್ರ ಮತ್ತು ಮಾನವಪರ ವ್ಯವಸ್ಥೆಯಾಗಿದೆ. ಈ ಸಮಾಜದಲ್ಲಿ ಜ್ಞಾನ, ಮಿಥ್ಯಾಭಿಮಾನ, ಅಜ್ಞಾನ, ಮೂಢನಂಬಿಕೆಗಳನ್ನು ನಿವಾರಿಸಿ ಯಥಾರ್ಥವನ್ನು ಅರಿಯುವ ವೈಜ್ಞಾನಿಕ, ತಾರ್ಕಿಕ ಮನೋಭಾವವನ್ನು ಬೆಳೆಸುತ್ತದೆ. ಕರುಣೆಯು ವ್ಯಕ್ತಿಗಷ್ಟೇ ಅಲ್ಲ, ಸರ್ವಜೀವಿಗಳ ಗೌರವ, ಸಹಾನುಭೂತಿ, ಪರಸ್ಪರ ಸಹಬಾಳ್ವೆ ಮತ್ತು ಹಿಂಸಾರಹಿತ ನಡವಳಿಕೆಯನ್ನು ಉತ್ತೇಜಿಸುತ್ತದೆ. ಸಮತವು ಜಾತಿ, ವರ್ಗ, ಲಿಂಗ, ಧರ್ಮ, ಭಾಷೆ ಎನ್ನುವ ಎಲ್ಲ ಸಾಮಾಜಿಕ ಬೇಧಗಳನ್ನು ಅಳಿಸಿ ಮಾನವ ಗೌರವ ಮತ್ತು ಸಮಾನ ಅವಕಾಶಗಳನ್ನು ಸ್ಥಾಪಿಸುತ್ತದೆ. ಅಹಿಂಸಾವು ದ್ವೇಷ, ಹಾನಿ ಮತ್ತು ಹಿಂಸಾಚಾರಗಳನ್ನು ತಳ್ಳಿಹಾಕಿ ಶಾಂತಿ, ಸಂವಾದ ಮತ್ತು ಸಹಕಾರದ ಸಂಸ್ಕೃತಿಯನ್ನು ಹೆಚ್ಚು ಬಲಪಡಿಸುತ್ತದೆ. ಹೀಗಾಗಿ ಬುದ್ಧ ಪ್ರಜ್ಞೆಯ ಸಮಾಜ ಎಂಬುದು ನೈತಿಕ ಶೀಲಾಧಾರಿತ ನಿರ್ವಹಣೆಯ ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯಕ್ಕೆ ಬದ್ಧತೆಯ ಜ್ಞಾನಾಧಾರಿತ ತೀರ್ಮಾನ ತಂತ್ರ ಕರುಣದ ಮೂಲಕ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನು ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಕೇಂದ್ರಗೊಳಿಸಿದ ಸಮಾಜ ರಚನೆಯು ಇವುಗಳ ಮೂಲಕ ಆಧ್ಯಾತ್ಮಿಕ ಜಾಗೃತಿ ಮತ್ತು ಸಾಮಾಜಿಕ ಪರಿವರ್ತನೆಯು ಒಂದಕ್ಕೊಂದು ಸಹಕಾರ ನೀಡುತ್ತವೆ.

ಬುದ್ಧ ಪ್ರಜ್ಞೆಯ ಸಮಾಜ ಎಂದರೆ; ಮಾನವ ಕೇಂದ್ರಿತ, ನ್ಯಾಯಪರ, ಸಮಾನತೆಯ, ವೈಜ್ಞಾನಿಕ ಮತ್ತು ಅಹಿಂಸೆಯ ಮೂಲಕ ಸಮಾಜ. ಇದು ಬೌದ್ಧಧಮ್ಮದ ತತ್ವಗಳನ್ನು ಆಧುನಿಕ ಸಮಾಜಶಾಸ್ತ್ರ ಪರಿವರ್ತನೆಯೊಂದಿಗೆ ಸಂಗಮಗೊಳಿಸುವ ಸಮಗ್ರ ಮಾನವ ಸಮಾಜದ ಮಾದರಿಯಾಗಿದೆ.

## ಪರಾಮರ್ಶನ ಗ್ರಂಥಗಳು


1. Abhidhamma Piṭaka
2. Anguttara Nikāya
3. Cakkavatti Sīhanāda Sutta
4. Cullavagga
5. Dhammapada
6. Dīgha Nikāya
7. Karunā Sutta
8. Mahāparinibbāna Sutta
9. Majjhima Nikāya
10. Nidāna Saṁyutta
11. Samyutta Nikāya
12. Samyutta Nikāya
13. Vasala Sutta
14. Vinaya Pitaka